

## ಮೂರು ತಲೆಮಾರಿನ ಗಡಿಗೆಗಳು

ಬೆಳೆ ಬೆಳೆಯುವುದು ಎಷ್ಟು ಮುಖ್ಯವೊ ಆ ಬೆಳೆಗಳನ್ನು ಸಂಗ್ರಹಿಸಿಡುವುದೂ ಅಷ್ಟೇ ಸವಾಲಿನ ಕೆಲಸ ರೈತರಿಗೆ. ತಂತ್ರಜ್ಞಾನ ಅಭಿವೃದ್ಧಿಯಾದಂತೆಲ್ಲಾ ಈಗ ಹಲವು ವಸ್ತು ಹಾಗೂ ಉಪಕರಣಗಳು, ಆಹಾರ ಪದಾರ್ಥಗಳ ಸಂಗ್ರಹಕ್ಕೆ ನೆರವಾಗುತ್ತಿವೆ. ಹಿರಿಯರ ಕಾಲದಲ್ಲಿ ಮಣ್ಣಿನ ಮಡಿಕೆ, ಗಡಿಗೆಗಳೇ ಗತಿ.

ಮಂಡ್ಯದ ನಾಗಮಂಗಲ ತಾಲ್ಲೂಕಿನ ಬಿಳಗುಂದ ಗ್ರಾಮದ ಹನುಮಮ್ಮ, ವೀರಯ್ಯ ದಂಪತಿ ಮನೆಯಲ್ಲಿ ಇಂದಿಗೂ ಮೂರು ತಲೆಮಾರಿನ ಗಡಿಗೆಗಳನ್ನು ಸಂರಕ್ಷಿಸಿಕೊಂಡು ಬರಲಾಗಿದೆ. ದೊಡ್ಡ ಗಡಿಗೆಗಳಲ್ಲಿ ಸುಮಾರು 100 ಕೆ.ಜಿ. ತೂಕದ ಅಕ್ಕಿ, ರಾಗಿಯಂಥ ಧಾನ್ಯಗಳು, ಆಹಾರ ಪದಾರ್ಥಗಳನ್ನು ಸಂಗ್ರಹಿಸಿ ಇಟ್ಟುಕೊಳ್ಳಬಹುದು. ಚಿಕ್ಕ ಗಾತ್ರದ ಗಡಿಗೆಗಳಲ್ಲಿ 10 ಕೊಡದಷ್ಟು ನೀರು ತುಂಬಿಸಬಹುದು. ಈ ಗಡಿಗೆಗಳನ್ನು ನಮ್ಮ ತಾಯಿ ಮಾಡಿಸಿದ್ದರು. ಅವರ ನೆನಪಿಗಾಗಿ ಹಾಳಾಗದಂತೆ ಇಂದಿಗೂ ಸಂರಕ್ಷಿಸಿದ್ದೇನೆ. ಮುಂದಿನ ನಮ್ಮ ವಾರಸುದಾರರು ಕೂಡ ಇವನ್ನು ಹಾಗೆಯೇ ಸಂರಕ್ಷಿಸಿಡುತ್ತಾರೆ ಎಂಬುದು ನನ್ನ ಆಶಾಭಾವ ಎನ್ನುತ್ತಾರೆ ಹನುಮಮ್ಮ ಅವರ ಮಗ ನಿವೃತ್ತ ಉಪ ಪ್ರಾಂಶುಪಾಲ ವಿವೇಕಾನಂದ.

—ಪೃಥ್ವಿರಾಜ್, ಬೆಂಗಳೂರು

## ಸುತ್ತಿಗೆ ತಲೆಯ ಹುಳ!

ಇತ್ತೀಚಿನ ಮಳೆಗೆ ಹೊಳೆ ಹಳ್ಳಗಳು ತುಂಬಿ ಹರಿದು ಮನೆಗಳಿಗೆ ನೀರು ನುಗ್ಗಿದ್ದು ಮಾತ್ರವಲ್ಲ ಹಾವು, ಚೇಳು, ಜೇಡ ಮುಂತಾಗಿ ನಾನಾ ಕ್ರಿಮಿಕೀಟಗಳೂ ಆಸರೆ ಹುಡುಕಿ ನುಗ್ಗಿದ್ದವು. ಅವುಗಳಲ್ಲಿ ಒಂದು ಅಪರೂಪಕ್ಕೆ ಕಂಡುಬಂದದ್ದು ‘ಸುತ್ತಿಗೆ ತಲೆಯ ಹುಳು’. ಆ ಹುಳು ಒಂದು ದಿನ ರಾತ್ರಿ ಒಳಮನೆಯ ನೆಲದ ಮೇಲೆ ಕಷ್ಟಪಟ್ಟು ಹರಿದಾಡುತ್ತಿತ್ತು. ಹಾವಿನಂತೆ ಬಳುಕುತ್ತ ಚಲಿಸುವ, ಸುತ್ತಿಗೆಯನ್ನೇ ಹೋಲುವ ತಲೆಯಿರುವ ಇದು ವಿಶಿಷ್ಟ ಹುಳು. ಮನುಷ್ಯರಿಗೆ ವಿಷವಲ್ಲವಂತೆ. ಆದರೆ ರೈತ ಮಿತ್ರನಾದ ಎರೆಹುಳುಗಳು ಇವುಗಳ ಊಟ. ಮಲೆನಾಡಿನಲ್ಲಿ ತೀವ್ರ ಮಳೆಗಾಲದಲ್ಲಿ ಅಪರೂಪಕ್ಕೆ ಕಾಣಿಸಿಕೊಳ್ಳುವ ಈ ಹುಳ ಸಾಮಾನ್ಯವಾಗಿ ತೋಟಗಳಲ್ಲಿ ಬಾಳೆಎಲೆಗಳ ಮೇಲೆ ಹರಿಯುವುದು, ಅಂಥ ಬಾಳೆಯನ್ನು ತೊಳೆಯದೇ ಊಟಮಾಡಿದರೆ ತೀವ್ರ ಅನಾರೋಗ್ಯಕ್ಕೆ ಕಾರಣವಾಗುವುದಂತೆ.

—ನಿರಂಜನ ವಾನಳ್ಳಿ, ಮೈಸೂರು







## ರೇಡಿಯೊ ಆಲಿಸಲಿಕ್ಕೂ ಪರವಾನಗಿ!

ಎಪ್ಪತ್ತರ ದಶಕದ ಮಧ್ಯಭಾಗದಲ್ಲಿ, ಪ್ರಪಂಚದ ಆಗುಹೋಗುಗಳನ್ನು ತಿಳಿದುಕೊಳ್ಳಲು ರೇಡಿಯೊವೊಂದೇ ಮಾಧ್ಯಮವಾಗಿತ್ತು. ಆಗ ಹಲವು ಬ್ಯಾಂಡ್‌ಗಳ ರೇಡಿಯೊ ಮಾರುಕಟ್ಟೆಯಲ್ಲಿ ಲಭ್ಯವಿದ್ದರೂ, ಕೇವಲ ಎರಡು ಬ್ಯಾಂಡ್‌ಗಳ ‘ಟ್ರಾನ್ಸಿಸ್ಟರ್’ ರೇಡಿಯೊ ಹೆಚ್ಚು ಜನಪ್ರಿಯವಾಗಿತ್ತು. ಅದಕ್ಕೆ ಎರಡು ಕಾರಣಗಳಿದ್ದವು: ‘ಟ್ರಾನ್ಸಿಸ್ಟರ್’ ಅನ್ನು ಹೆಗಲಿಗೆ ಹಾಕಿಕೊಂಡು ಎಲ್ಲಿ ಬೇಕಾದರೂ ಕೊಂಡೊಯ್ಯಬಹುದಾಗಿತ್ತು ಹಾಗೂ ಅದನ್ನು ಆಲಿಸಲು ಯಾವುದೇ ‘ಪರವಾನಗಿ’ಯ (ಲೈಸೆನ್ಸ್) ಅಗತ್ಯವಿರಲಿಲ್ಲ.

ಎರಡಕ್ಕಿಂತಲೂ ಹೆಚ್ಚು ಬ್ಯಾಂಡ್‌ಗಳ ರೇಡಿಯೊ ಉಪಯೋಗಿಸಲು ನಿಗದಿತ ಶುಲ್ಕ ಪಾವತಿಸಿ ಲೈಸೆನ್ಸ್ ಪಡೆಯಬೇಕಿತ್ತು. ಅದರ ನವೀಕರಣ ಪ್ರತಿ ವರ್ಷ ಕಡ್ಡಾಯ. ಈ ಚಿತ್ರದಲ್ಲಿ ಕಾಣುವ ದಾಖಲೆಗಳು ಅಂತಹ ಲೈಸೆನ್ಸ್ ಒಂದರ ಪ್ರತಿ. ಅದನ್ನು ಪಡೆದವರು ಚಿಂತಾಮಣಿಯ ಸಾಲಿಪೇಟೆ ನಿವಾಸಿ ಜಿ. ಕೃಷ್ಣಮಾಚಾರಿ. ಅವರು ಉಪಯೋಗಿಸುತ್ತಿದ್ದ ಐದು ಬ್ಯಾಂಡ್‌ಗಳ ‘ಜಿಇಸಿ ರೇಡಿಯೊ’ ಲೈಸೆನ್ಸ್ ಪಾಸ್‌ಬುಕ್ ಇದಾಗಿದೆ.

ಪ್ರತಿವರ್ಷ ಅವರು 15 ರೂಪಾಯಿ ಶುಲ್ಕ ಪಾವತಿಸಿ ರೇಡಿಯೊ ಉಪಯೋಗಿಸುತ್ತಿದ್ದರು. ಸೆಕೆಂಡ್ ಹ್ಯಾಂಡ್ ರೇಡಿಯೊ ಖರೀದಿಸಬೇಕಾದರೂ, ಮಾರಾಟಗಾರರಿಂದ 20 ಪೈಸೆ ರೆವೆನ್ಯೂ ಸ್ಟ್ಯಾಂಪ್ ಹಚ್ಚಿದ ಕಾಗದದ ಮೇಲೆ ಬರೆಯಿಸಿಕೊಂಡು ಅದನ್ನು ಅಂಚೆ ಕಚೇರಿಗೆ ನೀಡಬೇಕಿತ್ತು. ನಂತರ ಖರೀದಿಸಿದವರ ಹೆಸರಿಗೆ ಲೈಸೆನ್ಸ್ ವರ್ಗಾವಣೆ. ಹೊಸ ರೇಡಿಯೊ ಆದರೆ, ಅಂಗಡಿಯವರು ನೀಡಿದ ರಸೀದಿಯನ್ನು ಲಗತ್ತಿಸಿದರೆ ಸಾಕಿತ್ತು. ಟೀವಿ ಬಂದ ನಂತರ ರೇಡಿಯೊ ಉಪಯೋಗಿಸುವವರ ಸಂಖ್ಯೆ ಕಡಿಮೆಯಾಯಿತು. 1991ರಲ್ಲಿ ರೇಡಿಯೊ ಲೈಸೆನ್ಸ್ ಪಡೆಯುವುದನ್ನು ರದ್ದುಗೊಳಿಸಲಾಯಿತು.

—ಈರಣ್ಣ ಬೆಂಗಾಲಿ, ರಾಯಚೂರು

## ನೀವೂ ಬರೆಯಿರಿ

‘ಸುಧಾ’ ವಾರ ಪತ್ರಿಕೆಯಲ್ಲಿ ಪ್ರಕಟವಾಗುವ ನಿಮ್ಮಪುಟ ಓದುಗರ ಅಂಕಣ. ನಿಮ್ಮ ಸುತ್ತಮುತ್ತಲಿನ ವಿಶೇಷತೆಯ ಬಗ್ಗೆ ನೂರು ಪದಗಳ ಬರಹ ಮತ್ತು ಅದಕ್ಕೆ ಸಂಬಂಧಿಸಿದ ಚೆಂದದ ಫೋಟೊವನ್ನು ನಮಗೆ ಕಳುಹಿಸಿಕೊಡಿ.

ಇಮೇಲ್ ವಿಳಾಸ:

editorsu@sudha.co.in

@SudhaWeekly